O.S.No. 262 /2017
PW - 1

<u>ದಿನಾಂಕಃ 12.11.2019 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>

<u>ಪಾಟೀ ಸವಾಲು: ಶ್ರೀ ಎಸ್.ಆರ್ ವಕೀಲರಿಂದ:</u>

ನಮ್ಮ ತಂದೆ-ತಾಯಿಗೆ ನಾವು ಒಟ್ಟು ಮೂರು ಜನ ಮಕ್ಕಳು. ಅವರುಗಳು ಚಿಕ್ಕಮಾದಪ್ಪ, ದೊಡ್ಡಮಾದಪ್ಪ, ಮಾದಮ್ಮ ಆಗಿರುತ್ತೇವೆ. ನಾವು ಪ್ರತಿವಾದಿಗಳ ವಿರುದ್ದ ದಾವಾ ಆಸ್ತಿಯಲ್ಲಿ ಭಾಗ ಕೋರಿ ದಾವೆಯನ್ನು ಹೂಡಿರುತ್ತೇವೆ. ನಮ್ಮ ಕುಟುಂಬದ ಎಲ್ಲಾ ಆಸ್ತಿಗಳಲ್ಲಿ ವಿಭಾಗ ಆಗಿರುತ್ತದೆ. ನಮ್ಮ ಮನೆಯಲ್ಲಿ ನಾನು, ನನ್ನ ಹೆಂಡತಿ, ನಮ್ಮ ತಾಯಿ, ನನ್ನ ಮಕ್ಕಳು ವಾಸವಾಗಿರುತ್ತೇವೆ. ನಮ್ಮ ಭಾಗಕ್ಕೆ ಬಂದಂತಹ ಮನೆಯಲ್ಲಿ ವಾಸವಾಗಿರುತ್ತೇವೆ. ನಮ್ಮ ಮನೆಯಲ್ಲಿ ಭಾಗವಾದಾಗಿನಿಂದಲೂ ವಾಸವಾಗಿರುತ್ತೇವೆ. ದಾವಾ ಆಸ್ತಿಯ ಸ.ನಂ. 37 ಆಗಿರುತ್ತದೆ. ಅದರ ಚೆಕ್ಕುಬಂದಿ ಪೂರ್ವಕ್ಕೆ ಗೌಡಿಕೆ ಮಾದಪ್ಪ ರವರ ಜಮೀನು, ಪಶ್ಚಿಮಕ್ಕೆ ನಾಗಪ್ಪ ರವರ ಜಮೀನು, ಉತ್ತರಕ್ಕೆ ಮಂಚಯ್ಯನ ಸಿದ್ದಪ್ಪ, ದಕ್ಷಿಣಕ್ಕೆ ನಾಗರಾಜಪ್ಪರವರ ಜಮೀನು ಇರುತ್ತದೆ. ನನ್ನ ತಾಯಿ ಮಾಡಿದ ಮರಣ ಶಾಸನ ಪತ್ರದ ಬಗ್ಗೆ ನನಗೆ ಗೊತ್ತಿಲ್ಲ. ಪ್ರತಿವಾದಿ ನನಗೆ ನೋಟೀಸನ್ನು ನೀಡಿದಾಗ ಮರಣ ಶಾಸನದ ಬಗ್ಗೆ ತಿಳಿದಿರುತ್ತದೆ. ಸದರಿ ದಿನಾಂಕ, ವರ್ಷ ನನಗೆ ಗೊತ್ತಿಲ್ಲ. ನಾನು ಸಲ್ಲಿಸಿರುವ ಪ್ರಮಾಣ ಪತ್ರದಲ್ಲಿನ ವಿಚಾರಗಳು ನನಗೆ ಗೊತ್ತಿಲ್ಲ. ದಾವಾ ಆಸ್ತಿಯು ನನ್ನ ತಾಯಿಯ ಭಾಗಕ್ಕೆ ಬಂದ ಸ್ವತ್ತು ಎಂದರೆ ಸರಿ. ಸಾಕ್ಷಿಯು ಮುಂದುವರೆದು ನನ್ನ ತಾಯಿಯ ಜೀವನಕ್ಕೆ ಬಿಟ್ಟ ಆಸ್ತಿಯಾಗಿರುತ್ತದೆ ಎಂದು ನುಡಿಯುತ್ತಾರೆ. ಇದಕ್ಕೆ ಸಂಬಂಧಪಟ್ಟ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುವುದಿಲ್ಲ.

(ಮುಂದುವರೆದ ಪಾಟೀ ಸವಾಲಿಗಾಗಿ ವಕೀಲರು ಸಮಯಾವಕಾಶ ಕೋರಿದ್ದು, ಸಮಯ ನೀಡಲಾಯಿತು)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

ಅಪರ ಸಿವಿಲ್ ಜಡ್ಜ್ ಮತ್ತು ಜೆಎಂಎಫ್ ಸಿ
ಗುಂಡ್ಲುಪೇಟೆ